**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**. 227/2022

**PW**. 02

**CW**. 03

**ಸಾಕ್ಷಿಯ ಹೆಸರು – ಜಗದೀಶ**

**ತಂದೆಯ ಹೆಸರು – ದೇವೇಗೌಡ**

**ವಯಸ್ಸು – 62 ವರ್ಷಗಳು**

ದಿನಾಂಕ 15.04.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ವ್ಯವಸಾಯ**

**ವಾಸಸ್ಥಳ – ಹುಣಸೇಕೊಪ್ಪಲು ಗ್ರಾಮ, ಪಿರಿಯಾಪಟ್ಟಣ ತಾಲೂಕು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 2 ನನ್ನ ಸಹೋದರಿಯ ಮಗ. ಈಗ್ಗೆ ಎರಡು ವರ್ಷಗಳ ಹಿಂದೆ ಅನಾರೋಗ್ಯದಿಂದ ಮರಣ ಹೊಂದಿರುತ್ತಾನೆ. ಆತನು ಮರಣ ಹೊಂದುವ ಒಂದುವರೆ ವರ್ಷಗಳ ಹಿಂದೆ ಕಿತ್ತೂರು ಗ್ರಾಮದ ಹುಡುಗಿಯೊಂದಿಗೆ ಅವನ ವಿವಾಹವಾಗಿತ್ತು. ಆರೋಪಿ ನನಗೆ ಗೊತ್ತು. ಆಕೆಯೊಂದಿಗೆ ಚಾಸಾ 2 ರವರ ವಿವಾಹ ನಿಶ್ಚಯವಾಗಿತ್ತು, ಆದರೆ ಆರೋಪಿಯೊಂದಿಗೆ ವಿವಾಹವಾಗಲಿಲ್ಲ. ಫ್ರಾಸಾ 1 ನನ್ನ ಸೋದರ ಮಾವನ ಮಗ. ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ನಾನು ಪಿರಿಯಾಪಟ್ಟಣದಲ್ಲಿದ್ದಾಗ ಸಂಜೆ 7.30 ಗಂಟೆ ಸಮಯದಲ್ಲಿ ಫ್ರಾಸಾ 1 ರವರು ದೂರವಾಣಿ ಕರೆ ಮಾಡಿ ಚಾಸಾ 2 ರವರಿಗೆ ಯಾರೋ ಹಲ್ಲೆ ಮಾಡಿ ಗಾಯಗೊಳಿಸಿದ್ದಾಗಿ ಆತನನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬರುವುದಾಗಿ ತಿಳಿಸಿದರು. ನಾನು ಸ್ವಲ್ಪ ಸಮಯದ ನಂತರ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದೆ. ಫ್ರಾಸಾ1 ರವರು ಇನ್ನೂ ಬೇರೆ ನಾಲ್ಕು ಜನಗಳೊಂದಿಗೆ ಚಾಸಾ 2 ರವರನ್ನು ಚಿಕಿತ್ಸೆಗಾಗಿ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಲ್ಲಿ ಚಿಕಿತ್ಸೆ ನೀಡಿದ ವೈದ್ಯ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರ ಮೇರೆಗೆ ನಾವೆಲ್ಲರೂ ಸೇರಿ ಮೈಸೂರಿನ ಬೃಂದಾವನ ಆಸ್ಪತ್ರೆಗೆ ಚಾಸಾ 2 ರವರನ್ನು ದಾಖಲಿಸಿದೇವು. ಆ ಸಮಯದಲ್ಲಿ ಚಾಸಾ 2 ರವರಿಗೆ ಪ್ರಜ್ಞೆ ಇರಲಿಲ್ಲ.

ಚಾಸಾ 2 ರವರಿಗೆ ಒಂದು ವಾರದ ನಂತರ ಪ್ರಜ್ಞೆ ಬಂದಿತು. ಬೆಟ್ಟದಪುರ ಗ್ರಾಮದಲ್ಲಿ ಯಾರೋ ಬಂದು ನನಗೆ ಚಾಕುವಿನಿಂದ ಹಲ್ಲೆ ಮಾಡಿದ್ದಾಗಿ ಚಾಸಾ 2 ರವರು ತಿಳಿಸಿದ್ದಾರೆ. ಯಾರು ಹಲ್ಲೆ ಮಾಡಿದ್ದಾರೆ ಎಂದು ನನಗೆ ತಿಳಿಸಿರುವುದಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ಈ ಘಟನೆ ನಡೆದ ದಿನದಿಂದ ಮೂರು ತಿಂಗಳ ಹಿಂದೆ ಆರೋಪಿಯೊಂದಿಗೆ ಚಾಸಾ 2 ರವರ ವಿವಾಹ ನಿಶ್ಚಯವಾಗಿತ್ತು. ಅವರ ಇಬ್ಬರ ಮದುವೆ ದಿಃ 13.03.2020 ರಂದು ನಿಗದಿಯಾಗಿತ್ತು ಎಂದರೆ ನನಗೆ ನೆನಪಿಲ್ಲ. ಘಟನೆ ನಡೆದ ಎರಡು ದಿನಗಳ ನಂತರ ಚಾಸಾ 2 ರವರಿಗೆ ಪ್ರಜ್ಞೆ ಬಂದಿರುತ್ತದೆ ಎಂದರೆ ಸರಿ. ಚಾಸಾ 2 ರವರಿಗೆ ಪ್ರಜ್ಞೆ ಬಂದ ನಂತರ ಚಾಸಾ 2 ರವರು ನನ್ನ ಸಮಕ್ಷಮ ದಿಃ 02.03.2020 ರಂದು ಸಂಜೆ 7.00 ಗಂಟೆ ಸಮಯಕ್ಕೆ ಬೆಟ್ಟದಪುರ ಗ್ರಾಮದ ಕೃಷಿ ಇಲಾಖೆಯ ಕಟ್ಟಡದ ಬಳಿ ಆರೋಪಿ ಚಾಸಾ 2 ರವರನ್ನು ಕರೆ ಮಾಡಿ ಕರೆಯಿಸಿಕೊಂಡು ಆತನ ಕಣ್ಣಿಗೆ ಬಟ್ಟೆ ಕಟ್ಟಿ ಕೊಲೆ ಮಾಡುವ ಉದ್ದೇಶದಿಂದ ಆತನ ಹೊಟ್ಟೆಯ ಬಲಭಾಗ, ಬಲ ಪಕ್ಕೆಯ ಬಳಿ ಹಲ್ಲೆ ಮಾಡಿರುತ್ತಾಳೆಂದು ತಿಳಿಸಿದ್ದಾನೆ, ಆ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ರವರನ್ನು ಮದುವೆ ಮಾಡಿಕೊಳ್ಳಲು ಆರೋಪಿಗೆ ಇಷ್ಟವಿಲ್ಲದುದರಿಂದ ಆತನನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿ ಹಲ್ಲೆ ಮಾಡಿದ್ದಾಗಿ ತಿಳಿದು ಬಂತು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೋಲಿಸರಲ್ಲಿ ಸಮಕ್ಷಮ ನಿ.ಪಿ. 10 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.227/2022**
**PW.02**

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್. ವಕೀಲರಿಂದಃ-**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.